# ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ – 590 018

**ರಾಷ್ಟ್ರೀಯ ಸೇವಾ ಯೋಜನೆ**

ಡಾ|| ಹೆಚ್.ಎನ್. ಜಗನ್ನಾಥ ರೆಡ್ಡಿ ಬಿ.ಇ., ಎಂ.ಇ., ಪಿಹೆಚ್.ಡಿ.
ಕುಲಸಚಿವರು

ದೂರವಾಣಿ ಸಂ : 0831–2405468
ಫ್ಯಾಕ್ಸ್ ಸಂ : 0831–2405467

ಸಂ. ವಿತಾವಿ/ಬಿ.ಜಿ.ಎಮ್/ರಾ.ಸೇ.ಯೋ/ನಿಮ್ಹಾನ್ಸ್/36/2017-18/ 8328 ದಿನಾಂಕ: 15 DEC 2018

**:ಸುತ್ತೋಲೆ:**

**ವಿಷಯ:** ಜೀವನ ಕೌಶಲ್ಯ ತರಬೇತಿಗೆ ಎನ್.ಎಸ್.ಎಸ್.ಅಧಿಕಾರಿಗಳನ್ನು ನಿಯೋಜಿಸುವ ಬಗ್ಗೆ.

**ಉಲ್ಲೇಖ:** ಮುಖ್ಯ ಮಂತ್ರಿಗಳ ಬಜೆಟ್ ಭಾಷಣ 2015-16

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2015-16 ರ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಯವರು ತಮ್ಮ ಬಜೆಟ್ ಭಾಷಣದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರಿಗೆ ನಿಮ್ಹಾನ್ಸ್ ಸಹಯೋಗದೊಂದಿಗೆ ಎನ್.ಎಸ್.ಎಸ್. ಯೋಜನಾಧಿಕಾರಿಗಳ ಮೂಲಕ ಜೀವನ ಕೌಶಲ್ಯ ತರಬೇತಿಯ ಹೊಸ ಯೋಜನೆಯನ್ನು ಘೋಷಿಸಿದ್ದಾರೆ. ಅದರಂತೆ 2018-19 ನೇ ಸಾಲಿನಲ್ಲಿ ಇದನ್ನು ಮುಂದುವರಿಸಿದ್ದು, ನಿಮ್ಹಾನ್ಸ್ ಸಂಸ್ಥೆಯ ತರಬೇತಿ ಕಾರ್ಯಕ್ರಮವು ದಿನಾಂಕ 17.12.2018 ರಿಂದ 22.12.2018 ರವರೆಗೆ ಲೆಕ್ಚರ್ ಹಾಲ್–1, ಎಪಿಡೀಮಿಯಾಲಜಿ ವಿಭಾಗ, ಜನ ಆರೋಗ್ಯ ಕೇಂದ್ರ, ನಿಮ್ಹಾನ್ಸ್ ಬೆಂಗಳೂರು ಇಲ್ಲಿ ಆರಂಭವಾಗಲಿದೆ. ಸದರಿ ಕಾರ್ಯಕ್ರಮಕ್ಕೆ ಎನ್.ಎಸ್.ಎಸ್.ಯೋಜನಾಧಿಕಾರಿ ಅಲ್ಲದಿದ್ದರೂ ಆಸಕ್ತಿ ಇರುವ ಇತರ ಅಧ್ಯಾಪಕರನ್ನು ನಿಯೋಜಿಸಬಹುದಾಗಿದೆ. ಆದರೆ, ಅವರು ತರಬೇತಿಯ ನಂತರ ಸ್ವಯಂಸೇವಕರಿಗೆ ತರಬೇತಿ ನೀಡಬೇಕಾಗುತ್ತದೆ. ತರಬೇತಿಗೆ ವಸತಿ, ಊಟ, ಮತ್ತು ಪ್ರಯಾಣ ವೆಚ್ಚವನ್ನು ನೀಡಲಾಗುವುದು. ಕಳೆದ ಸಾಲಿನಲ್ಲಿ ತರಬೇತಿಯಲ್ಲಿ ಭಾಗವಹಿಸಿದ ಎನ್.ಎಸ್.ಎಸ್. ಅಧಿಕಾರಿಗಳು ಹಾಗೂ ಅಧ್ಯಾಪಕರು ತರಬೇತಿಯ ಬಗ್ಗೆ ಅತ್ಯಂತ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ತರಬೇತಿ ಹೊಂದಿದ ಎನ್.ಎಸ್.ಎಸ್. ಯೋಜನಾಧಿಕಾರಿಗಳು ಅಥವಾ ಅಧ್ಯಾಪಕರು ತಮ್ಮ ಮತ್ತು ಸುತ್ತಮುತ್ತಲಿನ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ತರಬೇತಿ ನಡೆಸಬಹುದಾಗಿದೆ. ಈ ಮೇಲಿನ ತರಬೇತಿ ಕಾರ್ಯಕ್ರಮಕ್ಕೆ ಮಹಾವಿದ್ಯಾಲಯಗಳ ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳ ಇಬ್ಬರು ಕಾರ್ಯಕ್ರಮಾಧಿಕಾರಿಗಳು/ಆಸಕ್ತಿ ಇರುವ ಇತರ ಅಧ್ಯಾಪಕರನ್ನು **ಕಡ್ಡಾಯವಾಗಿ** ನಿಯೋಜಿಸಬೇಕೆಂದು ಕೋರಲಾಗಿದೆ.

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು, ಸ್ವತಃ ಆಸಕ್ತಿ ವಹಿಸಿ ತಮ್ಮ ಮಹಾವಿದ್ಯಾಲಯದ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿಗಳನ್ನು/ಅಧ್ಯಾಪಕರನ್ನು ನಿಯೋಜಿಸಲು ಸೂಚಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಡಾ.ಪ್ರದೀಪ್ ಬಿ.ಎಸ್. ಪ್ರಧಾನ ಸಂಶೋಧಕರು, ಜೀವನ ಕೌಶಲ್ಯ ತರಬೇತಿ ಕಾರ್ಯಕ್ರಮ, ಜನ ಆರೋಗ್ಯ ಕೇಂದ್ರ, ಎಪಿಡೀಮಿಯಾಲಜಿ ವಿಭಾಗ, ನಿಮ್ಹಾನ್ಸ್ ಇವರನ್ನು ಸಂಪರ್ಕಿಸಬಹುದಾಗಿದೆ. ತರಬೇತಿಯಲ್ಲಿ ಭಾಗವಹಿಸುವ ಯೋಜನಾಧಿಕಾರಿಗಳು/ಅಧ್ಯಾಪಕರ ದೂರವಾಣಿ ಸಂಖ್ಯೆ ಮತ್ತು ಇ–ಮೇಲ್ ವಿವರಗಳನ್ನು ಕೂಡಲೆ ಅವರಿಗೆ ಕಳುಹಿಸಲು ಕೋರಲಾಗಿದೆ. (ದೂರವಾಣಿ: **ಡಾ.ಪ್ರದೀಪ್ ಬಿ.ಎಸ್** – 9845452250, ಇ–ಮೇಲ್ doctorpradeepbs@gmail.com ಮತ್ತು **ಡಾ.ಭರತ್ ಕಳಿದಿಂಡಿ**– 8792297778).

ವಂದನೆಗಳೊಂದಿಗೆ,

14/12/18

**ಕುಲಸಚಿವರು**

**ಇವರಿಗೆ,**

ಪ್ರಾಂಶುಪಾಲರು ಮತ್ತು ಸಂಯೋಜನಾಧಿಕಾರಿಗಳು, ವಿ.ತಾ.ವಿ. ಅಧಿನಕ್ಕೊಳಪಡುವ ಸಂಬಂದಪಟ್ಟ ಎಲ್ಲಾ ಅಭಿಯಾಂತ್ರಿಕ/ತಾಂತ್ರಿಕ ಮಹಾವಿದ್ಯಾಲಯಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಕುಲಪತಿಗಳು, ವಿ.ತಾ.ವಿ., ಬೆಳಗಾವಿ ಇವರಿಗೆ ಕುಲಪತಿಗಳ ಕಾರ್ಯದರ್ಶಿಗಳ ಮುಖಾಂತರ.
2. ರಾಜ್ಯ ಎನ್.ಎಸ್.ಎಸ್. ಅಧಿಕಾರಿಗಳು ರಾ.ಸೇ.ಯೋ. ಕೋಶ, ಯುಸೇಇ, ಬೆಂಗಳೂರು.
3. ವಿಶೇಷಾಧಿಕಾರಿಗಳು, ಸಿ.ಎನ್.ಸಿ ವಿಭಾಗ, ವಿತಾವಿ., ಬೆಳಗಾವಿ, ಇವರಿಗೆ ಸದರಿ ಸುತ್ತೋಲೆಯನ್ನು ವಿ.ತಾ.ವಿ.ಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.
4. ಕಛೇರಿ ಪ್ರತಿ.